# ಹಡಗಲಿಯ ಸೌಗಂಧಿಕಾಪುಷ್ಪ ಡಾ. ರಾವ್‌ಗೆ ನೂರರ ಸಂಭ್ರಮ

**ಕರ್ನಾಟಕದ ಹೂವಿನ ಹಡಗಲಿಯಲ್ಲಿ ಹುಟ್ಟಿ, ಪ್ರಸ್ತುತ ಅಮೆರಿಕದಲ್ಲಿ ನೆಲೆಸಿರುವ ಡಾ. ಸಿ.ಆರ್. ರಾವ್ ಅವರಿಗೆ ಸೆ. 10ಕ್ಕೆ ನೂರು ವರ್ಷ ತುಂಬುತ್ತಿದೆ. ಗಣಿತ ಮತ್ತು ಸಂಖ್ಯಾಶಾಸ್ತ್ರ ವಿಜ್ಞಾನದಲ್ಲಿ ಅಸಾಧಾರಣ ಸಾಧನೆ ಸಲ್ಲಿಸಿರುವ ಈ ಭಾರತೀಯನ ಸಾಧನೆಯ ಕುರಿತು ಅಮೆರಿಕದಲ್ಲಿ ಕಳೆದೊಂದು ವರ್ಷದಿಂದ ಕಾರ್ಯಕ್ರಮಗಳು ನಡೆಯುತ್ತಿವೆ. ನಮಗೆ ಮಾತ್ರ ಹಿತ್ತಲ ಗಿಡದ ಅರಿವೇ ಇಲ್ಲ.**

**■ ಗುರುರಾಜ್ ಎಸ್. ದಾವಣಗೆರೆ**



ಕಲೆ: ವಿನ್ಯಾಸ ಬಡಿಗೇರ

**1940**ರ ಜೂನ್. ಎರಡನೇ ವಿಶ್ವ ಮಹಾಯುದ್ಧದ ವಿನಾಶದ ತೀವ್ರತೆ ಎಲ್ಲೆಡೆ ಹಬ್ಬುತ್ತಿದ್ದ ಕಾಲ. ಅದೇ ಸಮಯಕ್ಕೆ ಉತ್ತರ ಆಫ್ರಿಕಾದ ಸೇನಾಪಡೆಯ ಸಮೀಕ್ಷಾ ಘಟಕಕ್ಕೆ ಗಣಿತಜ್ಞನೊಬ್ಬ ಬೇಕು ಎಂದು ಪತ್ರಿಕೆಯೊಂದರಲ್ಲಿ ಪ್ರಕಟಣೆಯನ್ನು ನೋಡಿ, ಕೆಲವು ದಿನಗಳ ಹಿಂದಷ್ಟೇ ತಂದೆಯನ್ನು ಕಳೆದುಕೊಂಡಿದ್ದ ಹತ್ತೊಂಬತ್ತರ ಹರಯದ ಯುವಕನೊಬ್ಬ ಅರ್ಜಿ ಸಲ್ಲಿಸಿದ. ಗಣಿತ ವಿಷಯದ ಪದವಿ ಪ್ರಮಾಣಪತ್ರ ಹಿಡಿದುಕೊಂಡು ದಕ್ಷಿಣದ ವಿಶಾಖಪಟ್ಟಣಂನಿಂದ 500 ಮೈಲಿ ದೂರದ ಕಲಕತ್ತೆಗೆ ಸಂದರ್ಶನಕ್ಕಾಗಿ ಬಂದ. ಇಂಟರ್ವ್ಯೂನಲ್ಲಿ ಚೆನ್ನಾಗಿ ಮಾಡಿದ್ದರೂ, ಕಿರಿಯ ವಯಸ್ಸಿನ ಕಾರಣಕ್ಕೆ ಕೆಲಸಕ್ಕೆ ಆಯ್ಕೆಯಾಗಲಿಲ್ಲ.

ಆ ಯುವಕ ತನ್ನ ನಿರಾಶೆಯನ್ನು ತಾನುಳಿದುಕೊಂಡಿದ್ದ ಹೋಟೆಲ್‌ನಲ್ಲಿ ಪರಿಚಯವಾದ ವ್ಯಕ್ತಿಯ ಜೊತೆ ಹಂಚಿಕೊಂಡ. ಆ ವ್ಯಕ್ತಿಯ ಸಲಹೆಯ ಮೇರೆಗೆ ಪ್ರೆಸಿಡೆನ್ಸಿ ಕಾಲೇಜಿಗೆ ಭೇಟಿ ನೀಡಿ, ಅಲ್ಲಿನ ಸ್ಟಾಟಿಸ್ಟಿಕ್ಸ್ ವಿಭಾಗದಲ್ಲಿ ಒಂದು ವರ್ಷ ಅವಧಿಯ ತರಬೇತಿಗೆ ಅರ್ಜಿ ಸಲ್ಲಿಸಿದ. ಈ ಮಧ್ಯೆ ಸಿವಿಲ್ ಸರ್ವಿಸ್ ಹುದ್ದೆ ಬಯಸಿ ಪರೀಕ್ಷೆಗೆ ಅರ್ಜಿ ಸಲ್ಲಿಸಿದ. ಆಗಲೂ 8 ತಿಂಗಳು ವಯಸ್ಸು ಕಡಿಮೆ ಎಂಬ ಕಾರಣಕ್ಕೆ ಅರ್ಜಿ ತಿರಸ್ಕೃತಗೊಂಡಿತು. ಅದಾಗಿ ಎರಡು ವಾರಗಳ ನಂತರ 'ಇಂಡಿಯನ್ ಸ್ಟಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್' (ಐಎಸ್ಐ)

**ಗಣಿತ ಮತ್ತು ಸಂಖ್ಯಾಶಾಸ್ತ್ರ ಕ್ಷೇತ್ರಗಳಿಗೆ ವಿಶ್ವಮಾನ್ಯ ಕೊಡುಗೆಗಳನ್ನು ನೀಡಿರುವ ಡಾ. ರಾವ್, ಆ ಕ್ಷೇತ್ರಗಳ ಘನತೆಯನ್ನೂ ಹೆಚ್ಚಿಸಿದ್ದಾರೆ. ತಮ್ಮ ಶಿಷ್ಯರ ಕೆಲಸಗಳನ್ನೇ ತಾವು ಸಮಾಜಕ್ಕೆ ನೀಡಿರುವ ಅತ್ಯುತ್ತಮ ಕೊಡುಗೆ ಎಂದು ಭಾವಿಸುವ ಘನ ವ್ಯಕ್ತಿತ್ವ ಅವರದು.**